# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 696 (748) |
| ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 13-03-2025 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಲೋಕಸೇವಾ ಆಯೋಗವು ಒಂದೇ ಒಂದು ಪ್ರಶ್ನೆಪತ್ರಿಕೆಯನ್ನು ಸಹ ದೋಷರಹಿತವಾಗಿ ಸಿದ್ಧಪಡಿಸಲು ಸಾಧ್ಯವಾಗದೆ ಉದ್ಯೋಗಾಕಾಂಕ್ಷಿಗಳ ಭವಿಷ್ಯಕ್ಕೆ ಮಾರಕವಾಗಿ ಪರಿಣಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಲೋಕಸೇವಾ ಆಯೋಗವು ಜನವರಿ 2024ರಿಂದ ಇಲ್ಲಿಯವರೆಗೆ 12 ಅಧಿಸೂಚನೆಗಳಲ್ಲಿ ಅಧಿಸೂಚಿಸಲಾದ ಒಟ್ಟು 1734 ಹುದ್ದೆಗಳಿಗೆ 37 ಪತ್ರಿಕೆಗಳಿಗೆ ಒಟ್ಟಾರೆ 11,40,292 ಅಭ್ಯರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಯಾವುದೇ ಲೋಪ ದೋಷಗಳಿಲ್ಲದೆ ಸುಲಲಿತವಾಗಿ ನಡೆಸಲಾಗಿರುತ್ತದೆ. ಸದರಿ ಪರೀಕ್ಷೆಗಳ ಪೈಕಿ ದಿನಾಂಕ:27-08-2024ರಂದು ನಡೆದ 2023-24ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ಪೂರ್ವಭಾವಿ ಪರೀಕ್ಷೆ ಹಾಗೂ ದಿನಾಂಕ:29-12-2024ರಂದು ಗೆಜೆಟೆಡ್ ಪ್ರೊಬೆಷನರ್ಸ್ ಪೂರ್ವಭಾವಿ ಮರು ಪರೀಕ್ಷೆಗಳಗೆಸಂಬಂಧಿಸಿದಂತೆ ಕನ್ನಡ ಪ್ರಶ್ನೆ ಪತ್ರಿಕೆಯಲ್ಲಿ ಉಂಟಾಗಿರುವ ಭಾಷಾಂತರ ಲೋಪದೋಷಗಳ ಬಗ್ಗೆ ಪರೀಕ್ಷಾರ್ಥಿಗಳಿಗೆ ಗೊಂದಲ ಉಂಟಾಗಿರುವುದಾಗಿ ಅಭ್ಯರ್ಥಿಗಳು ಹಾಗೂ ಸಂಘ/ ಸಂಸ್ಥೆಗಳು ಮನವಿ ಸಲ್ಲಿಸಿರುತ್ತಾರೆ.<br><br>ಈ ಸಂಬಂಧ ಅಭ್ಯರ್ಥಿಗಳಿಂದ ಸ್ವೀಕೃತವಾದ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ಉತ್ತಮ ಕನ್ನಡ ಭಾಷಾ ಜ್ಞಾನವನ್ನು ಹೊಂದಿರುವ ಹಾಗೂ ಆಯಾ ವಿಷಯಗಳಲ್ಲಿ ಪರಿಣತಿ ಹೊಂದಿರುವಂತಹ ಮೂವರು ವಿಷಯ ತಜ್ಞರುಗಳ ಸಮಿತಿಗಳನ್ನು ರಚಿಸಿ |

| | | |
|---|---|---|
| | | ಅಭಿಪ್ರಾಯವನ್ನು ಪಡೆಯಲಾಗಿದ್ದು, ಭಾಷಾಂತರ ಮತ್ತು ತಾಂತ್ರಿಕ ದೋಷದಿಂದಾಗಿ ಕೆಲವು ಪ್ರಶ್ನೆಗಳಿಗೆ ಕೃಪಾಂಕ ಹಾಗೂ ಕೆಲವು ಪ್ರಶ್ನೆಯ ಕೀ-ಉತ್ತರವನ್ನು ಪರಿಷ್ಕರಿಸಬೇಕೆಂದು, ಕೆಲವು ಪ್ರಶ್ನೆಗಳಲ್ಲಿ ವ್ಯತ್ಯಾಸವಿದ್ದರೂ ಸಹ ಪ್ರಶ್ನೆಯನ್ನು ಅರ್ಥೈಸಿಕೊಳ್ಳಬಹುದೆಂದು, ಕೆಲವು ಪ್ರಶ್ನೆಗಳಲ್ಲಿ ಕಾಗುಣಿತಾಕ್ಷರಗಳ ಮುದ್ರಣ ದೋಷವಾಗಿರುವುದಾಗಿಯೂ ಹಾಗೂ ಇನ್ನುಳಿದ ಪ್ರಶ್ನೆಗಳಲ್ಲಿ ಯಾವುದೇ ಭಾಷಾಂತರ ವ್ಯತ್ಯಾಸವಿರುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ. |
| (ಆ) | ಬಂದಿದ್ದಲ್ಲಿ, ಕಾರ್ಯಕ್ಷಮತೆ ಕುಸಿತ, ವ್ಯಾಪಕ ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತದಂತಹ ಕಾರಣಗಳಿಂದಾಗಿ ಆಯೋಗವನ್ನು ಸುಧಾರಿಸಲು ಸರ್ಕಾರ ಇದುವರೆಗೆ ಯಾವುದೇ ಕಠಿಣ ಕ್ರಮಗಳನ್ನು ಕೈಗೊಳ್ಳಲು ವಿಫಲವಾಗಿರುವುದಕ್ಕೆ ಕಾರಣಗಳೇನು; | ದಿನಾಂಕ:23-01-2025ರಂದು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಲೋಕಸೇವಾ ಆಯೋಗಗಳ ಸಹಯೋಗದೊಂದಿಗೆ ಒಂದು ಕನ್ನಡ ಭಾಷಾ ತಜ್ಞರ ತಂಡವನ್ನು ರಚಿಸಲು ಪರಿಶೀಲಿಸಲಾಗುತ್ತಿದೆ. |
| (ಇ) | ಯಾವ ಕಾಲಮಿತಿಯೊಳಗೆ, ಆಯೋಗಕ್ಕೆ ಕಾಯಕಲ್ಪ ನೀಡುವುದರ ಜೊತೆಗೆ ಅದರ ಕಾರ್ಯವೈಖರಿ ಸುಧಾರಿಸಲು ಹಾಗೂ ವಿಶ್ವಾಸಾರ್ಹತೆ ಮರಳಿ ಪಡೆಯಲು ಸಾಧ್ಯವಾಗುವಂತೆ ಸರ್ಕಾರ ಅಗತ್ಯ ಹಾಗೂ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು? | ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಮತ್ತು ಸ್ವಜನ ಪಕ್ಷಪಾತ ತಡೆಗಟ್ಟಲು ಹಾಗೂ ವಿಶ್ವಾಸಾರ್ಹತೆ ಮರಳಿ ಪಡೆಯುವ ಸಂಬಂಧ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>• ಆಯೋಗದಲ್ಲಿ ಈ ಹಿಂದೆ ಕಾರ್ಯದರ್ಶಿಯವರೇ ಪರೀಕ್ಷಾ ನಿಯಂತ್ರಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಕರ್ನಾಟಕ ಸರ್ಕಾರವು ರಚಿಸಿದ್ದ ಶ್ರೀ ಪಿ.ಸಿ. ಹೋಟಾ ಸಮಿತಿಯು ನೀಡಿರುವ ವರದಿಯ ಆಧಾರದ ಮೇಲೆ ನೇಮಕಾತಿಗಳಲ್ಲಿ ಪಾರದರ್ಶಕತೆಯನ್ನು ತರಲು ಗೋಪ್ಯ ಕಾರ್ಯಗಳನ್ನು ನಿರ್ವಹಿಸಲು ಒಂದು |

| | | | |
|---|---|---|---|
| | | | ಪರೀಕ್ಷಾ ನಿಯಂತ್ರಕರ ಹುದ್ದೆಯನ್ನು ಸೃಜಿಸಲಾಗಿರುತ್ತದೆ ಮತ್ತು ಸದರಿ ಹುದ್ದೆಯನ್ನು ಭಾರತೀಯ ಆಡಳಿತ ಸೇವೆಯ ಅಧಿಕಾರಿಯವರಿಂದ ಭರ್ತಿ ಮಾಡಲಾಗುತ್ತಿದೆ.<br><br>• ಇದಲ್ಲದೆ, ಆಯೋಗದಲ್ಲಿನ ಪರೀಕ್ಷಾ ನಿಯಂತ್ರಕರಿಗೆ ಹೆಚ್ಚಿನ ಕಾರ್ಯದ ಒತ್ತಡವಿದ್ದ ಹಿನ್ನೆಲೆಯಲ್ಲಿ ಆಯೋಗದಲ್ಲಿದ್ದ ಜಂಟಿ ಕಾರ್ಯದರ್ಶಿ ಹುದ್ದೆಯನ್ನು ಜಂಟಿ ಪರೀಕ್ಷಾ ನಿಯಂತ್ರಕರ ಹುದ್ದೆಯೆಂದು ಪದನಾಮೀಕರಿಸಲಾಗಿರುತ್ತದೆ ಹಾಗೂ ಅಖಿಲ ಭಾರತ ಸೇವೆಯ ವೃಂದದ ಅಧಿಕಾರಿಯಿಂದ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಸದರಿ ಅಧಿಕಾರಿಗೆ ಗ್ರೂಪ್ 'ಸಿ' ವೃಂದದ ಪರೀಕ್ಷೋತ್ತರ ಕಾರ್ಯಗಳಲ್ಲದೆ ಇಲಾಖಾ ಪರೀಕ್ಷೆಗಳ ಪೂರ್ಣ ಗೌಪ್ಯ ಕಾರ್ಯಗಳನ್ನು ವಹಿಸಲಾಗಿರುತ್ತದೆ.<br><br>• ಆಯೋಗದಲ್ಲಿನ ಪರೀಕ್ಷಾ ಪೂರ್ವ ಮತ್ತು ಪರೀಕ್ಷೋತ್ತರ ಗೌಪ್ಯ ಕಾರ್ಯಗಳ ಮೇಲೆ ನಿಗಾ ವಹಿಸಲು, ಪಾರದರ್ಶಕತೆಯನ್ನು ಕಾಪಾಡಲು ಹಾಗೂ ಮಾಹಿತಿ ಸೋರಿಕೆಯನ್ನು ತಡೆಗಟ್ಟುವ ಸಲುವಾಗಿ ಗೌಪ್ಯ ಶಾಖೆಗಳಿಗೆ ಆಯೋಗದಲ್ಲಿ ಪ್ರತ್ಯೇಕವಾದ ಸ್ಥಳಾವಕಾಶವನ್ನು ಕಲ್ಪಿಸಲಾಗಿದ್ದು, ಅಲ್ಲಿಗೆ ಅಧಿಕೃತ ವ್ಯಕ್ತಿಗಳನ್ನು ಹೊರತುಪಡಿಸಿ ಆಯೋಗದ ಇತರ ಅಧಿಕಾರಿ/ಸಿಬ್ಬಂದಿಗಳಾಗಲೀ ಹಾಗೂ ಇನ್ನಿತರ ವ್ಯಕ್ತಿಗಳ ಪ್ರವೇಶವನ್ನು ನಿರ್ಬಂಧಿಸಲು ಹಾಗೂ ಮೊಬೈಲ್ ಫೋನ್ ಕೊಂಡೊಯ್ಯುವುದನ್ನು ತಡೆಗಟ್ಟಲು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿರುತ್ತದೆ ಹಾಗೂ 24*7 C.C.T.V. Surveillance ವ್ಯವಸ್ಥೆಯನ್ನು |

| | | | |
|---|---|---|---|
| | | | ಕಲ್ಪಿಸಲಾಗಿರುತ್ತದೆ.<br><br>• ಆಯೋಗದ ಪರೀಕ್ಷೆಗಳನ್ನು ನಡೆಸುವಂತಹ ಪರೀಕ್ಷಾ ಉಪಕೇಂದ್ರಗಳಲ್ಲಿ ಪ್ರತಿ ಪರೀಕ್ಷಾ ಕೊಠಡಿಗಳಿಗೆ ಮತ್ತು ನಿಯಂತ್ರಣ ಕೊಠಡಿಗೆ ಸಿ.ಸಿ.ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದೆ.<br><br>• ಇದಲ್ಲದೆ, ಪರೀಕ್ಷೆ ನಡೆಯುವ ಮುನ್ನ ಪ್ರಶ್ನೆ ಪತ್ರಿಕೆ ಪರೀಕ್ಷಾ ಕೇಂದ್ರದಲ್ಲಿ ಸ್ವೀಕೃತವಾದ ಸಮಯದಿಂದ ಹಿಡಿದು ಪರೀಕ್ಷೆಗಳನ್ನು ಮುಗಿಸಿ ಪರೀಕ್ಷಾ ಸಾಮಾಗ್ರಿಗಳನ್ನು ಆಯೋಗಕ್ಕೆ ರವಾನಿಸುವರೆಗಿನ ಸಂಪೂರ್ಣ ಪ್ರಕ್ರಿಯೆಗಳನ್ನು Time Stamp ವಿಡಿಯೋಗ್ರಫಿ ಮಾಡಿಸಲಾಗುತ್ತಿದೆ. ಇದಲ್ಲದೆ ಅಭ್ಯರ್ಥಿಗಳು ಪರೀಕ್ಷಾ ಬರೆಯುವ ಸಂದರ್ಭದಲ್ಲಿಯೂ ಎಲ್ಲಾ ಕೊಠಡಿಗಳಲ್ಲಿಯೂ ವಿಡಿಯೋಗ್ರಾಫರ್ ಮುಖಾಂತರ ವಿಡಿಯೋ ಚಿತ್ರೀಕರಣ ಮಾಡಿಸಲಾಗುತ್ತಿದೆ.<br><br>• ಅಭ್ಯರ್ಥಿಗಳು ಮೊಬೈಲ್, ಬ್ಲೂಟೂತ್ ಮತ್ತು ಇನ್ನಿತರೆ ಆಧುನಿಕ ಸಂವಹನ ಉಪಕರಣಗಳನ್ನು ಬಳಸಿ ದುರಾಚಾರ ಪ್ರಕರಣಗಳನ್ನು ಎಸಗುವುದನ್ನು ತಡೆಗಟ್ಟುವ ಸಲುವಾಗಿ ಪರೀಕ್ಷಾ ಉಪಕೇಂದ್ರಗಳಲ್ಲಿ ರೂಂ-ಜಾಮರ್‌ಗಳನ್ನು ಅಳವಡಿಸಲಾಗುತ್ತಿದೆ ಹಾಗೂ HHMD (Hand Held Metal Detector)ಯಂತ್ರದ ಸಹಾಯದಿಂದ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಗೆ ತೆರಳುವ ಮುನ್ನ ಪ್ರತಿ ಅಭ್ಯರ್ಥಿಯ ಸಂಪೂರ್ಣ ತಪಾಸಣೆ ಮಾಡಿಸಲಾಗುತ್ತಿದೆ.<br><br>• ಆಯೋಗದ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳ impersonation ತಪ್ಪಿಸುವ ಸಲುವಾಗಿ Face Recognization/ Bio-metric ಹಾಜರಾತಿ ತೆಗೆದುಕೊಳ್ಳುವ |

ಪದ್ಧತಿಯನ್ನು ಜಾರಿ ಮಾಡಲಾಗಿರುತ್ತದೆ

- ಪರೀಕ್ಷೆಗೆ ಪ್ರತಿ ಅಭ್ಯರ್ಥಿಗಳಿಗೆ ವ್ಯಕ್ತಿಗತ (Personalised O.M.R) ಓ.ಎಂ.ಆರ್. ಹಾಳೆಗಳನ್ನು ಒದಗಿಸಲಾಗುತ್ತದೆ ಹಾಗೂ ಓ.ಎಂ.ಆರ್. ಹಾಳೆಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದ್ದು, ಒಂದು ಭಾಗದಲ್ಲಿ ಅಭ್ಯರ್ಥಿಗಳ ವಿವರಗಳನ್ನು ಮತ್ತು ಇನ್ನೊಂದು ಭಾಗದಲ್ಲಿ ಉತ್ತರಗಳ ಆಯ್ಕೆಗಳನ್ನು ಒಳಗೊಂಡಿರುತ್ತದೆ. ಸದರಿ ಭಾಗಗಳನ್ನು ಪರೀಕ್ಷಾ ಉಪಕೇಂದ್ರಗಳಲ್ಲಿಯೇ Perforation ಮಾಡಿ ಪ್ರತ್ಯೇಕಿಸಿ ಪ್ರತ್ಯೇಕ Tamper Evident Cover ನಲ್ಲಿರಿಸಿ ಸೀಲ್ ಮಾಡಿರುವ ಬಂಡಲ್‌ಗಳನ್ನು ಆಯೋಗದಲ್ಲಿ ಸ್ವೀಕರಿಸಲಾಗುತ್ತಿದೆ.

- ಪರೀಕ್ಷಾ ಕೇಂದ್ರಗಳಿಗೆ ಅಭ್ಯರ್ಥಿಗಳನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ Radomization ಪದ್ಧತಿಯನ್ನು ಅಳವಡಿಸಿಕೊಳ್ಳಲಾಗುತ್ತಿದೆ.

- ಆಯೋಗದ ಕಛೇರಿಗೆ ಅನಧಿಕೃತ ವ್ಯಕ್ತಿಗಳ ಪ್ರವೇಶವನ್ನು ತಡೆಗಟ್ಟುವ ಸಲುವಾಗಿ ಆಯೋಗದ ಕಛೇರಿಗೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ರಾಜ್ಯದಲ್ಲಿ ಮುಂದುವರೆದು, ಸರ್ಕಾರವು ನೇಮಕಾತಿ ಪ್ರಾಧಿಕಾರಗಳು ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅನುವಾಗುವಂತೆ ಅನುಸರಿಸಬೇಕಾದ ವಾರ್ಷಿಕ ವೇಳಾ ಪಟ್ಟಿಯನ್ನು (Calendar of Events) ನಿಗಧಿಪಡಿಸಿ, ದಿನಾಂಕ: 17.01.2025 ರಂದು ಸುತ್ತೋಲೆ ಹೊರಡಿಸಿದೆ.

**ಸಂಖ್ಯೆ: ಸಿಆಸುಇ 54 ಎಸ್‌ಎಲ್‌ಎ 2025**

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**